ಆಯೋಗ ಹಾಗೂ ಮಂಡಲಗಳನ್ನು ನೇಮಕ ಮಾಡುವ ಬಗ್ಗೆ

೫೭ (೧೧೬) ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಮುಖ್ಯ ಮುಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ನೇಮಕವಾದ ಆಯೋಗ ಹಾಗೂ ಮಂಡಳಿಗಳೆಷ್ಟು?

ಆ) ಅವುಗಳಲ್ಲಿ ಎಷ್ಟು ವರದಿ ಸಲ್ಲಿಸಿವೆ ಇನ್ನೆಷ್ಟು ವರದಿ ಸಲ್ಲಿಸುವ ಹಂತದಲ್ಲಿವೆ ?

ಇ) ಈ ಮಂಡಳಿ ಅಥವಾ ಆಯೋಗಗಳ ಕಾರ್ಯಾಚರಣೆಗೆ ತಗಲಿರುವ ವೆಚ್ಚವೆಷ್ಟು ?

ಈ) ವರದಿಗಳನ್ನು ಕಾರ್ಯಾಚರಣೆಗೆ ತರಲಾಗಿದೆಯೆ, ಇಲ್ಲವಾದರೆ ಇನ್ನೆಷ್ಟು ಕಾಲ ಬೇಕಾಗುವುದು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಆಯೋಗಗಳು : ೧೭

ಮಂಡಲಿಗಳು : ಇಲ್ಲ

ಆ) ವರದಿ ಸಲ್ಲಿಸಿರುವುದು : ೫

ಸಲ್ಲಿಸುವ ಹಂತದಲ್ಲಿ ಇರುವುದು : ೧೨

ಇ) ರೂ. ೧೯,೮೦,೨೫೯–೬೧ ಪೈಸೆ

ಈ) ೧) ಜಸ್ಟೀಸ್ ಗೋಪಿ ವಲ್ಲಭ ಐಯ್ಯಂಗಾರ್ ಆಯೋಗದ ಶಿಫಾರಸ್ಸಿನ ಬಗ್ಗೆ ಸಧ್ಯದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು.

೨) ವೇತನ ಆಯೋಗದ ೨೧ ವೇತನ ಶ್ರೇಣಿಗಳನ್ನು ಸರ್ಕಾರ ಒಪ್ಪಿದೆ ಉಳಿದ ಶಿಫಾರಸ್ಸುಗಳನ್ನು ಸರ್ಕಾರ ಪರಿಶೀಲಿಸುತ್ತಿದ್ದು, ಈ ಬಗ್ಗೆ ಸಧ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಾಗುವುದು.

೩) ಹೊನ್ನಾಳಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ ರಚಿಸಿದ್ದ ಎ.ಬಿ. ಮುರಗೋಡ್‌ರವರು ಸಲಿಸಿದ ವರದಿ ಬಗ್ಗೆ ಶೀಘ್ರದಲ್ಲೇ ಕ್ರಮ ತೆಗೆದುಕೊಳ್ಳಲಾಗುವುದು.

೪) ರಾಜ್ಯ ಭಾಷಾ ಆಯೋಗ ಭಾಷಾಂತರ ಕಾರ್ಯವನ್ನು ನಿರ್ವಹಿಸುತ್ತಿದೆ. ಇದನ್ನು ಕಾರ್ಯಾಚರಣೆಗೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.

೫) ಡಾ॥ ಸರೋಜಿನಿ ಮಹಿಷಿ ಸಮಿತಿಯು ದಿನಾಂಕ ೩೧–೧೨–೮೬ರಂದು ವರದಿ ಸಲ್ಲಿಸಿದ್ದು ಇದರ ಕಾರ್ಯಾಚರಣೆಯ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ ಪರೀಕ್ಷಿಸಲಾಗುತ್ತಿದೆ. ಆದುದರಿಂದ, ಇಷ್ಟೇ ಕಾಲವೆಂದು ಹೇಳಲಿಕ್ಕೆ ಆಗುವುದಿಲ್ಲ.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾವಣೆಗಳನ್ನು ನಡೆಸುವ ಬಗ್ಗೆ

೫೮ (೧೧೪) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಪತಿಯಿಂದ ವಿಧಾನ ಪರಿಷತ್ತಿಗೆ ಚುನಾವಣೆಗಳನ್ನು ನಡೆಸಲು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವಾಗ ನಡೆಸಲಾಗುವುದು?